# ನಾಂದಿಪದ

ಉಣ್ಣುವುದಕ್ಕೆ ಸಂಬಂಧಿಸಿದಂತೆ 'ಇದು ಜೀವಕ್ಕೆ ಬಹಳ ಒಳ್ಳೆಯದು' ಎಂಬ ಮಾತಿದೆ. ಇದು ದೇಹಕ್ಕಿಂತ ಹೆಚ್ಚಾಗಿ ಮನಸ್ಸಿಗೆ ಸಂಬಂಧಿಸಿದ್ದು. ಜೀವವನ್ನು ಪೊರೆಯುವ ಸಂಗತಿಗಳು ಬದುಕಿನಲ್ಲಿ ಹಲವಾರು. ಸಂಗೀತ, ಕತೆ, ಹಾಡು, ಹಸೆ, ಚಿತ್ರ, ಕಸೂತಿಗಳು ನಮ್ಮ ಜೀವಕ್ಕೆ ಹುಮ್ಮಸ್ಸು ತುಂಬಿ ಜೀವನವನ್ನು ಮುನ್ನಡೆಸುತ್ತವೆ. ಸದಾ ಅಶಾಂತ, ಚಡಪಡಿಕೆಯ, ಬಂಡೇಳುತ್ತಿರುವ ನಮ್ಮ ಮನಸ್ಸನ್ನು ಕೊಂಚ ಹದ್ದುಬಸ್ತಿನಲ್ಲಿಟ್ಟು, ಸಂತೈಸಿ, ಸಲುಹುತ್ತಿರುವುದು ಇಂತಹ ಸಂಗತಿಗಳೇ.

ನಮ್ಮ ವ್ಯಕ್ತಿತ್ವಕ್ಕೆ ಹೊಂದದ ಕೆಲಸ, ವೃತ್ತಿಗಳನ್ನು ಮಾಡುತ್ತೇವೆ. ಕವಿಯೊಬ್ಬ ಗುಮಾಸ್ತನಾಗಿರಬಹುದು. ಸಂಗೀತಗಾರ, ಆಟಗಾರ, ಕಲಾವಿದರು ತಮ್ಮ ಕಲೆಗೆ ಯಾವ ರೀತಿಯಲ್ಲೂ ಸಂಬಂಧಿಸದ ವೃತ್ತಿಗಳನ್ನು ಮಾಡುತ್ತಿರಬಹುದು. ಮನಸ್ಸಿಗೆ ಒಲ್ಲದ ಕೆಲಸಗಳನ್ನು ಉಪಜೀವನಕ್ಕಾಗಿ ನಿರ್ವಹಿಸಬೇಕಾಗುತ್ತದೆ. ಈ ಒಲ್ಲದ ಕೆಲಸಗಳೇ ಅವರ ಕಲೆಗೆ ಹೊಸ ಹೊಳಪು, ಸೌಂದರ್ಯ, ಬಿಡುಗಡೆಯನ್ನು ಕೊಡಬಹುದು. ತಮಗೆ ಖುಷಿ ಕೊಡುವ ಕಲೆಗಳಲ್ಲಿ ತೊಡಗಿಕೊಂಡು ಬದುಕಿನಲ್ಲಿ ತುಸು ನೆಮ್ಮದಿ ಕಂಡುಕೊಳ್ಳುತ್ತಾರೆ. ಬೇಸಿಗೆಯಲ್ಲಿ ಆಗಾಗ ಬೀಸುವ ತಂಗಾಳಿಯಂತಿರುತ್ತದೆ ಈ ಖುಷಿ. ಇದು ಕೇವಲ ವ್ಯಕ್ತಿತ್ವವನ್ನು ಬೆಳೆಸುವ ಕಲೆಗಳಲ್ಲಿ ಮಾತ್ರ ಇರುವುದಿಲ್ಲ. ಊರಿನ ನಾಲ್ಕು ಮಕ್ಕಳಿಗೆ ಲೆಕ್ಕ ಹೇಳಿಕೊಡುವುದರಲ್ಲಿ, ಸಾರ್ವಜನಿಕರ ಬಳಕೆಗೆ ಅಗತ್ಯವಾದ ಸಂಗತಿಯ ಕುರಿತಂತೆ ಸಂಬಂಧಿಸಿದವರಿಗೆ ಪತ್ರ ಬರೆಯುವುದರಲ್ಲಿ, ಬಡ ಅಜ್ಜನಿಗೆ ವೃದ್ಧಾಪ್ಯ ವೇತನ ಬರುವಂತೆ ಮಾಡುವುದರಲ್ಲಿ ಕೂಡ ಇರಬಹುದು. ದೈನಿಕದಲ್ಲಿ ಇನ್ನೊಬ್ಬರಿಗೆ ಯಾವ ಸ್ವಾರ್ಥವೂ ಇಲ್ಲದೆ ನೆರವಾಗುವುದರಲ್ಲೇ ಬದುಕಿನ ಸಾರ್ಥಕ್ಯ ಕಾಣುತ್ತಾರೆ ಕೆಲವರು. ಇವೆಲ್ಲ ಬದುಕಿನ ಕುರಿತು ಅವರದಷ್ಟೇ ಅಲ್ಲ, ಸುತ್ತಲಿನವರ ಮಮತೆ, ಅಂತಃಕರಣದ ವಲಯಗಳನ್ನು ವಿಸ್ತರಿಸುತ್ತಿರುತ್ತವೆ, ಜೀವನ ದೃಷ್ಟಿ ತಿದ್ದುತ್ತವೆ. ಹೀಗೆ ತಮಗೆ ತೋಚಿದಂತೆ ಬದುಕನ್ನು ನಡೆಸುತ್ತಿರುವವರು ಅಪಾರ ಸಂಖ್ಯೆಯಲ್ಲಿದ್ದಾರೆ. ಅವರಿಗೆ ತತ್ವ, ಜಿಜ್ಞಾಸೆ, ಸಮಾಜ ಸೇವೆಯ ಭಾರ ಬೇಕಿಲ್ಲ. ತಮ್ಮ ಜೀವ ಹೇಳಿದಂತೆ ಮಾಡುವ, ಅದಕ್ಕೆ ವಿರುದ್ಧ ಹೋಗದವರು ಅವರು. ಯಾರಿಗೂ ಕೇಡು ಬಗೆದಿಲ್ಲ ಎಂದೇ ಅಂದಿನ ನಿದ್ದೆ ಅವರಿಗೆ ಎರವಾಗುವುದಿಲ್ಲ.



ಎಲ್ಲ ಇದ್ದೂ ಇಲ್ಲದುದರ ಕಡೆ ಯಾಕೆ ಜೀವ ತುಯ್ಯುತ್ತಿರುತ್ತದೆ? ಎಂಬುದಕ್ಕೆ ಸರಳ ಹಾಗೂ ಎಲ್ಲರಿಗೂ ಒಪ್ಪಿತವಾಗುವ ಉತ್ತರಗಳಿಲ್ಲ. ತನ್ನ ಜೀವಕ್ಕೆ ಬೇಕಾದುದು ಏನು ಎಂಬುದನ್ನು ಸಾಧ್ಯವಾದಷ್ಟು ಬೇಗ ಎಲ್ಲರೂ ತಾವೇ ಕಂಡುಕೊಳ್ಳಬೇಕಾಗುತ್ತದೆ. ಹಾಗೆ ತಿಳಿದುಕೊಳ್ಳುವಷ್ಟರಲ್ಲಿ ಕೆಲವರ ಆಯುಷ್ಯವೇ ಮುಗಿದುಹೋಗುತ್ತದೆ. ಬೇಂದ್ರೆಯ ಕವಿತೆ, ರಾಜಕುಮಾರ್ ಸಿನಿಮಾ, ಅನಂತನಾಗ್ ನಟನೆ, ನಿನ್ನೆಯ ಸೊಪ್ಪಿನ ಸಾರು, ಗದ್ದೆ ಬಯಲಿನಲ್ಲಿ ನಡೆದ ಯಕ್ಷಗಾನ, ಜಾತ್ರೆಗೆ ಬಂದ ನಾಟಕ, ಮೀನಿನ ಪೇಟೆಯಲ್ಲಿ ಕಂಡ ಮುಖ ಯಾಕೆ ಅಷ್ಟು ಸನಿಹವಾಗುತ್ತವೆ? ನಿತ್ಯದ ಬದುಕಿನ ಚಲನೆಯಲ್ಲಿ ಹೊಮ್ಮಿದ ಅವಕ್ಕೆ ಅವುಗಳದೇ ಆದ ಪರಿಮಳ, ಬಣ್ಣ, ಸ್ವರಗಳ ಇಂಪಿದೆ. ಅಂತಹ ಪುಟ್ಟ ವಿವರಗಳಲ್ಲೇ ಮನುಷ್ಯ ಜಗತ್ತಿನ ಲಯ, ಜೀವಂತಿಕೆ ನಿಂತಿದೆ. ಅವೇ ಅನುದಿನವೂ ನಮ್ಮ ಜೀವ, ಜೀವನವನ್ನು ಬೆಚ್ಚಗಿಟ್ಟು ಕಾಯುತ್ತಿರುತ್ತವೆ.

**ಸಂದೀಪ ನಾಯಕ**